ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಶಿವಮೊಗ್ಗದಿಂದ ತೀರ್ಥಹಳ್ಳಿವರೆಗೆ ಒಟ್ಟು ರಾಷ್ಟ್ರೀಯ ಹೆದ್ದಾರಿ 60 ಕಿಮೀ ಇದ್ದು, 20 ಕಿಮೀ ರಸ್ತೆ ಕಾಮಗಾರಿ ಮಾತ್ರ ಬಾಕಿ ಇದೆ.

ಆ) ಈ ಕಾಮಗಾರಿಗೆ ರೂ. 352.62 ಲಕ್ಷಗಳಿಗೆ ಎರಡು ಅಂದಾಜುಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿವೆ. ಕೇಂದ್ರ ಸರ್ಕಾರವು ಕಾಮಗಾರಿವಾರು ಅನುದಾನ ನಿಗದಿಪಡಿಸಿರುವುದಿಲ್ಲ, ಒಟ್ಟಾರೆ ಒದಗಿಸಿರುವ ಅನುದಾನದಲ್ಲಿ ಕಾಮಗಾರಿಯ ವೆಚ್ಚಕ್ಕನುಗುಣವಾಗಿ ಹಣ ಬಿಡುಗಡೆ ಮಾಡಲಾಗುತ್ತದೆ.

ಇ) ಈ ಕಾಮಗಾರಿಗಳನ್ನು ದಿನಾಂಕ 12.6.2003 ರಂದು ಪ್ರಾರಂಭಿಸಲಾಗಿದ್ದು, ದಿನಾಂಕ 11.3.2004 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ತೀರ್ಥಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣಕ್ಕೆ ಕೇಂದ್ರದ ನೆರವು

2409(3126) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೀರ್ಥಹಳ್ಳಿಯಲ್ಲಿ ನಿರ್ಮಿಸುತ್ತಿರುವ ಸಾರ್ವಜನಿಕ ಕ್ರೀಡಾಂಗಣದ ನಿರ್ಮಾಣ ವೆಚ್ಚ ಭರಿಸಲು ಕೇಂದ್ರ ನೆರವಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;

ಆ) ಸಲ್ಲಿಸಲಾಗಿದ್ದಲ್ಲಿ, ಯಾವಾಗ ಸಲ್ಲಿಸಲಾಗಿದೆ; ಎಷ್ಟು ಮೊತ್ತಕ್ಕೆ ಸಲ್ಲಿಸಲಾಗಿದೆ;

ಇ) ಇಲ್ಲದಿದ್ದಲ್ಲಿ, ಕಾರಣಗಳೇನು? ಯಾವಾಗ ಸಲ್ಲಿಸಲಾಗುವುದು;

ಈ) 2003–04ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ನಿಗಧಿ ಮಾಡಿರುವ ಹಣ ಎಷ್ಟು;

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ ಖರ್ಗೆ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಹೌದು

ಆ) ದಿನಾಂಕ 9.11.2001ರಂದು ರೂ.ಗಳು 18.00 ಲಕ್ಷ

ಇ) ಉದ್ಭವಿಸುವುದಿಲ್ಲ.

ಈ) ಜಿಲ್ಲಾ ಪಂಚಾಯತ್ ವತಿಯಿಂದ ರೂ. 1.00 ಲಕ್ಷ

ಶಿವಮೊಗ್ಗ ಜಿಲ್ಲೆಯಲ್ಲಿ ಪರಿಹಾರ ಕಾಮಗಾರಿಗಳು

2411 (3128) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು):

ಆ) ಬರಪರಿಹಾರ ಕಾಮಗಾರಿಗೆ ಕೇಂದ್ರದಿಂದ ಬಿಡುಗಡೆಯಾದ ಹಣ ಎಷ್ಟು; ಆಹಾರ ಧಾನ್ಯ ಎಷ್ಟು;